ಆಳ್ವಾಸ್ ಕಾಲೇಜು ಮೂಡುಬಿದಿರೆ

ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ

2016–17ನೇ ಸಾಲಿನ ಕಾರ್ಯಕ್ರಮ ವರದಿ

ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ ಆಳ್ವಾಸ್ ಕಾಲೇಜು ಮೂಡುಬಿದಿರೆ ಇದರ ವತಿಯಿಂದ 2016–17ನೇ ಸಾಲಿನಲ್ಲಿ ಒಟ್ಟು ಇಪ್ಪತ್ತು ಮೌಲಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಕೃಷ್ಣರಾಜ ಕರಬ ಸಂಯೋಜಕರು ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ ಇವರು ವಿದ್ಯಾರ್ಥಿ ಕಾರ್ಯದರ್ಶಿಗಳಾದ ಯಶಸ್ವಿ(ದ್ವಿತೀಯ ಬಿ.ಎ ಕಾರ್ಯದರ್ಶಿ) ಹಾಗೂ ಪ್ರಾಣೇಶ್ (ದ್ವಿತೀಯ ಬಿ.ಕಾಂ ಸಹಕಾರ್ಯದರ್ಶಿ)ರೊಂದಿಗೆ 2016–17ನೇ ಸಾಲಿನ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದು ಆ ಎಲ್ಲಾ ಕಾರ್ಯಕ್ರಮಗಳ ವರದಿ ಹೀಗಿದೆ. 30.7.2016ರಂದು ಸಾಕ್ಷ್ಯಚಿತ್ರಗಳನ್ನು ವಿದ್ಯಾರ್ಥಿಗಳಿಗೆ ತೋರಿಸುವ ಮೂಲಕ ಸಾಮಾಜಿಕ ಎಚ್ಚರ ಮೂಡಿಸಲಾಯಿತು. ಡಾಯೋಗೀಶ್ ಕೈರೋಡಿಯವರು ಸಭೆಯಲ್ಲಿ ಉಪಸ್ಥಿತರಿದ್ದರು. 6.8.2016ರಂದು ನುಡಿಸಿರಿ ವೇದಿಕೆಯಲ್ಲಿ ಕಾರ್ಗಿಲ್ ಮತ್ತು ಅಬ್ದುಲ್ ಕಲಾಂ ಸಂಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 13.8.2016ರಂದು ಶ್ರೀಯುತ ರಾಮ್ ಪ್ರಸಾದ್ ಕಾಂಚೋಡು ಇವರಿಂದ ತತ್ತ್ವಪದ ಗಾಯನ–ವಿಶ್ಲೇಷಣೆ ಕಾರ್ಯಕ್ರಮ ಜರುಗಿತು. ನಟನೆ ಮತ್ತು ರಂಗ ಪ್ರದರ್ಶನಕ್ಕೆ ಪೂರಕವಾದ ನಟನೆ ಪ್ರಾತ್ಯಕ್ಷಿಕೆ 20.8.2016ರಂದು ಆಂಗ್ಲ ಉಪನ್ಯಾಸಕಿ ಸುಧೀಕ್ಷಾರವರಿಂದ ಸಂಪನ್ನಗೊಂಡಿತು. 27.8.2016ರಂದು ಆಧುನಿಕತೆ ಮತ್ತು ಭಾರತ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಾ ಗೋಷ್ಠಿ ನಡೆಸಲಾಯಿತು. ದಿನಾಂಕ 24.9.2016ರಂದು ಕಾವ್ಯಸಿರಿ ಎಂಬ ಕಾರ್ಯಕ್ರಮಕ್ಕೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಎಂ.ಮೋಹನ್ ಆಳ್ವರವರು ಚಾಲನೆ ನೀಡಿದರು.

ದಿನಾಂಕ 1.10.2016 ವಿದ್ಯಾರ್ಥಿಗಳಿಗಾಗಿ ಭಾಷಣ ಸ್ಪರ್ಧೆ ಅಧ್ಯಯನ ಕೇಂದ್ರದ ವತಿಯಿಂದ ನಡೆಸಲಾಯಿತು. 8.10.2016ರಂದು ವೀಡಿಯೋ ಕವನ ಪ್ರದರ್ಶನ ಮತ್ತು ಸಂವಾದ ನಡೆಸಲಾಯಿತು. ದಿನಾಂಕ 14.10.2016ರಂದು ನಡೆದ 'ಕಾವ್ಯಾಭಿವ್ಯಕ್ತಿ' ಎಂಬ ವಿಶೇಷ ಉಪನ್ಯಾಸ ನಡೆಸಲಾಯಿತು. 24.12.2016ರಂದು ವಿದ್ವಾನ್ ವಿನಾಯಕ್ ಭಟ್‌ರವರಿಂದ ರಾಮಾಯಣ ಮತ್ತು ಉದಾತ್ತ ಮೌಲ್ಯಗಳ ಕುರಿತು ಉಪನ್ಯಾಸ ನೀಡಿಲಾಯಿತು. ಡಾ। ಪ್ರಸನ್ನ ಕುಮಾರ ಐತಾಳ ಕುಂದಾಪುರ ಇವರಿಂದ ದಿನಾಂಕ 31.12.2016ರಂದು ಕುವೆಂಪು ಸಭಾಂಗಣದಲ್ಲಿ 'ಸುಭಾಷಿತ ಮತ್ತು ಜೀವನ ದರ್ಶನ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು. ಕನ್ನಡ ವಿಕಿಪೀಡೀಯಾದ ಕುರಿತು ದಿನಾಂಕ 7.1.2017ರಂದು ಡಾ.ಮೌಲ್ಯ ಜೀವನ ರಾಂ ರವರು ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿದರು. ದಿನಾಂಕ 1.2.2017ರಂದು ಕುವೆಂಪು ಸರಿಭಾಗಣದಲ್ಲಿ ತುಳುನಾಡಿನ ವರ್ಣನೆ ಮುನಿರಾಜ ರಂಜಾಳ ಅವರಿಂದ ಉಪನ್ಯಾಸ ನಡೆಯಿತು. 11.2.2017ರಂದು ವಾಣಿಜ್ಯವಿಭಾಗದ ಪ್ರೊ.ಅಶೋಕ್.ಕೆ.ಜಿ ರವರು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. 18.2.2017ರಂದು ಒಟ್ಟು ಕಾರ್ಯಕ್ರಮದ ಅವಲೋಕನ ನಡೆಸಿ ಸಾಹಿತ್ಯಾ ಚರ್ಚೆ ನಡೆಸಲಾಯಿತು.

ಡಾ.ಕೃಷ್ಣರಾಜಕರಬ
ಸಂಚಾಲಕರು

ಕನ್ನಡ ಸಂ

ಕನ್ನಡ ಸಂಘ

ನಡೆನೆ-ಪ್ರಾತ್ಯಕ್ಷಿಕೆ
I BCA 'A'
Saturday

ಕನ್ನಡ ಸಂಘ

ನ್ನಡ ಸಂಘ